**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ**

**ಸಿಸಿ ಸಂಃ 3741/2022**

| | | |
|---|---|---|
| ಸಾಕ್ಷಿಯ ಹೆಸರುಃ | ಪುಟ್ಟರಾಜು ಎಂ.ಎಸ್. | ಪ್ರಾಸಾಃ 8 |
| ತಂದೆಯ ಹೆಸರುಃ | ಶಿವಣ್ಣ | ಚಾಸಾಃ 16 |
| ವಯಸ್ಸುಃ | 62 ವರ್ಷ | ಪ್ರಮಾಣೀಕರಿಸಿದ<br>ದಿಃ 13.11.2025 |
| ಉದ್ಯೋಗಃ | ನಿವೃತ್ತ ಪಿ.ಎಸ್.ಐ | |
| ವಾಸಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ** ಸಸಅ **ರಿಂದಃ**

ನಾನು ದಿಃ 03.01.2022 ರಿಂದ 31.01.2023 ರವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿಃ 26.04.2022 ರಂದು ಠಾಣಾ ಪಿಐ ರವರು ಈ ಪ್ರಕರಣದಲ್ಲಿ ಮಹಜರ್ ಮಾಡುವಂತೆ ಮೌಖಿಕ ಆದೇಶ ನೀಡಿದ್ದು, ಅದರಂತೆ ಸ್ಥಳಕ್ಕೆ ಹೋಗಿ ಚಾಸಾ - 1 ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿ, ಮಲಬಾರ್ ಹೊಟೇಲ್ ಹತ್ತಿರ ಇದ್ದ ಕೆಎ.11.ಎಂ.3749 ರ ಮಾರುತಿ ಕೆ10 ಕಾರನ್ನು ಮತ್ತು ಕೆಎ.03.ಹೆಚ.ಇ.369 ರ ಹೊಂಡಾ ಸ್ಕೂಟಿ ವಾಹನಗಳನ್ನು ಅಮಾನತುಪಡಿಸಿಕೊಂಡು, ಸಂಜೆ 5-30 ರಿಂದ 6-30 ಗಂಟೆಯವರೆಗೆ ಮಹಜರ್ ಕ್ರಮ ಜರುಸಿರುತ್ತೇನೆ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಠಾಣೆಗೆ ವಾಪಸಾಗಿ ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿರುತ್ತೇನೆ.
2. ನಂತರ ಪ್ರಕರಣದ ಕಡತವನ್ನು ಪಿಐ ರವರಿಗೆ ಮುಂದಿನ ತನಿಖೆಗಾಗಿ ವಹಿಸಿಕೊಟ್ಟಿರುತ್ತೇನೆ.
3. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿ.ಪಿ.2** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಡಿ)** ಎಂದು ಗುರುತಿಸಲಾಯಿತು.
4. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿ.ಪಿ.3** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಸಿ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ **ಪರ ವಕೀಲ**ರಿಂದಃ

1. ಪಿಐ ರವರು ನನಗೆ ದಿಃ 26.04.2022 ರಂದು ಮೌಖಿಕ ಆದೇಶ ನೀಡಿರುತ್ತಾರೆ.
2. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಮಹಜರನ್ನು ಪಂಚರ ಸಮಕ್ಷಮ ಮಾಡಿಲ್ಲ ಮತ್ತು ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ಕಚ್ಚಾ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ.
3. ನಾನು ಮಹಜರನ್ನು ಹಾಗೂ ನಕಾಶೆಯನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.
4. ನಾನು ಆರೋಪಿಗೆ ಅನಾನುಕೂಲವಾಗಲಿ ಎಂದು ಮತ್ತು ಪಿರ್ಯಾಧಿಗೆ ಅನುಕೂಲವಾಗಲಿ ಎಂದು ಮೇಲಾಧಿಕಾರಿಗಳ ಮಾತನ್ನು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಪ್ರ. ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.